## ಇರ್ಫಾನ್ ಕಾಣಿಸುವ ಅನನ್ಯ ಸತ್ಯಗಳು



ಮೇ 21ರ ಸಂಚಿಕೆಯಲ್ಲಿ ನಟರಾಜ್ ಹುಳಿಯಾರ್ ಬರೆದ 'ಇರ್ಫಾನ್ ಪಾತ್ರಗಳು ಕಾಣಿಸುವ ಅನನ್ಯ ಸತ್ಯಗಳು' ಲೇಖನ ತುಂಬಾ ಚೆನ್ನಾಗಿ ಮೂಡಿಬಂದಿದೆ. ನನಗೆ ತಿಳಿದಿರುವ ಹಾಗೆ ಬಾಲಿವುಡ್ ಚಿತ್ರರಂಗದಲ್ಲಿ ಪರಕಾಯ ಪ್ರವೇಶ ಮಾಡುವ ಕೆಲವೇ ನಟರಲ್ಲಿ ಇರ್ಫಾನ್ ಖಾನ್ ಕೂಡ ಒಬ್ಬರು. ಅವರ ಹೆಚ್ಚಿನ ಸಿನಿಮಾಗಳನ್ನು ನೋಡಿದ್ದೆ. ಇವರ ಮ್ಯಾನರಿಸಂ, ಡೈಲಾಗ್ ಡೆಲಿವರಿ ತುಂಬಾ ಅದ್ಭುತವಾಗಿತ್ತು. ಉತ್ತುಂಗದಲ್ಲಿರುವಾಗಲೇ ಈ ನಟ ನಮ್ಮನ್ನೆಲ್ಲ ಅಗಲಿದ್ದು ತುಂಬಾ ಬೇಸರದ ವಿಷಯ. ಏನೇ ಇರಲಿ, ಒಬ್ಬ ನಟನಾಗಿ ಇರ್ಫಾನ್ ಖಾನ್ ಚಿರಸ್ಥಾಯಿ.

—ಮಹಮ್ಮದ್ ಇಕ್ಬಾಲ್, ಹಾಲಾಡಿ

ಹನ್ನೆರಡು ಸೆಕೆಂಡ್‌ನ ಒಂದು ಚಿಕ್ಕ ವೊಡಾಫೋನ್ ಜಾಹೀರಾತಿನಲ್ಲಿ ನಾನು ಮೊದಲ ಬಾರಿ ಇರ್ಫಾನ್ ಖಾನ್‌ರನ್ನು ನೋಡಿದ್ದು. ಮುಂದೆ ಅವರೊಬ್ಬ ಪ್ರತಿಭಾವಂತ ನಟರಾಗುತ್ತಾರೆಂದು ಅಂದೇ ಅನಿಸಿತ್ತು.

— ಟಿ.ಎಸ್. ಕುಪ್ಪಣ್ಣ, ರಾಯಚೂರು

## ದಾದಿಯಮ್ಮಂದಿರಿಗೆ ನಮಸ್ಕಾರ



ಮೇ 14ರ ಸಂಚಿಕೆಯಲ್ಲಿ ಸ್ವಯಂಪ್ರಭಾ ಬರೆದ 'ದಾದಿಯಮ್ಮಂದಿರಿಗೆ ನಮಸ್ಕಾರ' ಲೇಖನ ಓದಿ ಮನಸ್ಸಿಗೆ ನೋವಾಯಿತು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಪಿ.ಪಿ.ಇ. ಎಂಬ ಕವಚ ಧರಿಸಿ ಮಾಡುವ ಸೇವೆ ಸಾಧಾರಣವೇನಲ್ಲ. ತಮ್ಮ ಕುಟುಂಬವನ್ನು ಮರೆತು ಶಂಕಿತ ಮತ್ತು ಸೋಂಕಿತರ ಸೇವೆ ಮಾಡುತ್ತಿದ್ದಾರೆ. ಅವರಿಗೆ ನಮ್ಮ ಸರ್ಕಾರ ಹೆಚ್ಚಿನ ಸೌಲಭ್ಯಗಳು, ಆರ್ಥಿಕ, ಸಾಮಾಜಿಕ ಭದ್ರತೆಯೊಂದಿಗೆ ಉತ್ತಮ ರಕ್ಷಣೆಯನ್ನೂ ನೀಡಬೇಕು.

—ಸುಜಾತ ಬಸವರಾಜ್ ಕೆ.,
ಶಶಿರೇಖಾ, ಬೆಂಗಳೂರು

ಫ್ಲಾರೆನ್ಸ್ ನೈಟಿಂಗೇಲ್ ಅವರು ಸಮಾಜಸೇವೆಗೆ ತನ್ನ ಜೀವನವನ್ನೇ ಮುಡಿಪಾಗಿಟ್ಟರು. ಅವರು ಇಂದಿನ ದಾದಿಯರಿಗೆ ಮಾದರಿ. ದಾದಿಯರು ಸೋಂಕು ಪೀಡಿತರ ಆರೈಕೆ ಮಾಡುತ್ತಾ ತನ್ನ ಕುಟುಂಬದವರೊಂದಿಗೆ ದೂರಾಗಿ, ರೋಗಿಗಳ ಬಂಧುವಾಗಿ ಕೆಲಸ ನಿರ್ವಹಿಸುತ್ತಾರೆ. ಇವರನ್ನು ಯೋಧರು ಗೌರವಿಸಿರುವುದು ಸಂತೋಷ ತಂದಿದೆ. ಸರ್ಕಾರ ಇವರನ್ನು ನರ್ಸಿಂಗ್ ಆಫೀಸರ್ ಎಂಬ ಬಿರುದಿನಿಂದ ಗೌರವಿಸುತ್ತಿದೆ.

—ಎಂ. ಎಸ್. ಉಷಾ ಪ್ರಕಾಶ್, ಮೈಸೂರು

ಸಂಚಿಕೆಯ ಹತ್ತು ಪುಟಗಳನ್ನು ದಾದಿಯಮ್ಮಂದಿರಿಗೆ ಮೀಸಲಿಟ್ಟದ್ದು ಶ್ಲಾಘನೀಯ. ಅವರು ತಮ್ಮ ಕೆಲಸವನ್ನು ವೃತ್ತಿಧರ್ಮವೆಂದು ಭಾವಿಸದೆ ತಮ್ಮಲ್ಲಿ ರಕ್ತಗತವಾಗಿರುವ ಪರೋಪಕಾರ, ಪರಕಾಳಜಿ, ತ್ಯಾಗ, ನಿಸ್ವಾರ್ಥ, ಸೇವೆ ಎಂಬ ಸ್ತ್ರೀಧರ್ಮವನ್ನು ಮೆರೆದಿದ್ದಾರೆ. ಹೆಣ್ಣನ್ನು ನಕಾರಾತ್ಮಕವಾಗಿ ಬಣ್ಣಿಸುವವರಿಗೆ ತಾವು ನಿಷ್ಕಳಂಕ ಪ್ರೀತಿಯನ್ನು ಉಣಿಸುವ 'ಶಕ್ತಿ' ದೇವತೆಗಳು ಮಾತ್ರ ಎಂದು ಸಾರಿದ್ದಾರೆ. ಇಂತಹ ಕರುಣಾ ಮೂರ್ತಿ ದಾದಿಯಮ್ಮಂದಿರಿಗೆ ಒಂದಲ್ಲ, ತುಂಬಾ ನಮಸ್ಕಾರಗಳು.

—ಎಡ್ವರ್ಡ್ ರೊಡ್ರಿಗಸ್ ಎಸ್. ಜೆ, ಬೆಂಗಳೂರು

ಸರ್ಕಾರ ದಾದಿಯರ ಆರೋಗ್ಯ ರಕ್ಷಣೆ ಕಡೆ ಹೆಚ್ಚು ಕಾಳಜಿ ವಹಿಸಬೇಕು. ಅವರಿಗೆ ಅವಶ್ಯಕತೆ ಇರುವ ಸಲಕರಣೆಗಳನ್ನು ಆದ್ಯತೆ ಮೇರೆಗೆ ಒದಗಿಸಬೇಕು. ಅವರ ಜೀವನಮಟ್ಟ ಸುಧಾರಿಸುವಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕು. ಖಾಸಗೀ ಆಸ್ಪತ್ರೆಗಳಲ್ಲಿ ದಾದಿಯರ ಶೋಷಣೆಗೆ ಕಡಿವಾಣ ಹಾಕಬೇಕು. ಆರೋಗ್ಯ ಇಲಾಖೆಗೆ ಆರೋಗ್ಯದ ಬಗ್ಗೆ ಅರಿವು ಇರುವವರು ಸಚಿವರಾಗಬೇಕು.

—ಶಿವಕುಮಾರ್

## ಸ್ವರ್ಗದ ಮರ ಲಕ್ಷ್ಮಿತರು



ಮೇ 21ರ ಸಂಚಿಕೆಯಲ್ಲಿ ನೇಮಿಚಂದ್ರ ಬರೆದ 'ಸ್ವರ್ಗದ ಮರ ಲಕ್ಷ್ಮಿತರು' ಲೇಖನ ಕಣ್ಣು ತೆರೆಸುವಂತಿದೆ. ದೇಹದಲ್ಲಿ ರೋಗನಿರೋಧಕ ಶಕ್ತಿ ಉತ್ತಮಪಡಿಸುವ ಹಾಗೂ ಕ್ಯಾನ್ಸರ್ ಎಂಬ ಮಹಾಮಾರಿಗೆ ಮಾರಕವಾಗಬಲ್ಲ ಈ ಮರವನ್ನು ಎಲ್ಲರೂ ಬೆಳೆಸಿದರೆ ರೋಗವನ್ನು ಒದ್ದೋಡಿಸಬಹುದೆಂಬ ದೃಢನಂಬಿಕೆ ನನಗಿದೆ. ಆ ಗಿಡದ ಔಷಧೀಯ ಗುಣಗಳನ್ನು ವಿವರಿಸಿ ನನಗೂ ಆ ಗಿಡ ನೆಡಬೇಕೆಂಬ ಆಸೆ ಉಂಟಾಗಿದೆ.

—ಪಿ. ವಾಸುದೇವ ಭಟ್, ಉಡುಪಿ

## ಗಣಿತ ಶಿಖರ ರಾಮಾನುಜನ್

ಮೇ 7ರ ಸಂಚಿಕೆಯಲ್ಲಿ ಸಿಡ್ನಿ ಶ್ರೀನಿವಾಸ್ ಬರೆದ 'ಗಣಿತ ಶಿಖರ ರಾಮಾನುಜನ್' ಅವರ ಜೀವನದ ಕುರಿತ ಲೇಖನ ಓದಿ ಹೃದಯ ಕಲಕಿತು. ಇಡೀ ವಿಶ್ವವೇ ಬೆರಗಾಗುವಂತೆ ಅವರು ನೀಡಿದ ಅತ್ಯುನ್ನತ ಗಣಿತ ಪ್ರಮೇಯಗಳು ಇಂದಿನ ಯುಗದ ಸಾವಿರಾರು ಪ್ರಗತಿಪರ ಸಾಧನೆಗೆ ಗಳಿಗೆ ಲಭ್ಯವಾಗಿದೆ. ಈ ಮಹಾಪುರುಷರು ವಿಶ್ವಕ್ಕೆ ತಮ್ಮ ಸೇವೆಸಲ್ಲಿಸುವ ಕಾರಣಕ್ಕಾಗಿಯೇ ಜನ್ಮತಳೆದು ತಮ್ಮ ಎಳೆಯ ವಯಸ್ಸಿನಲ್ಲಿ ಜೀವನದ ಯಾತ್ರೆ ಮುಗಿಸುತ್ತಾರೆ.

—ಬಿ. ಭಾರ್ಗವ ರಾಮ್, ಬೆಂಗಳೂರು

## 'ನುಡಿ ನನ್ನದು'

ಮೇ 14ರ ಸಂಚಿಕೆಯಲ್ಲಿ ಪ್ರಕಟವಾದ ರೇಣುಕಾ ಚಿತ್ರದುರ್ಗ ಅವರ 'ನುಡಿ ನನ್ನದು' ಪ್ರಬಂಧ ಬಹಳ ಸುಂದರವಾಗಿದೆ. ಕನ್ನಡದ ಸೊಗಡನ್ನು ತಮ್ಮ ಬರಹದಲ್ಲಿ ಆತ್ಮೀಯವಾಗಿ ನಿರೂಪಿಸಿದ್ದಾರೆ. ಇಂಗ್ಲಿಷ್ ಬೆರಕೆ ಮಾಡದೆ ಕನ್ನಡ ಬಳಸಲು ಸಾಧ್ಯವೇ ಇಲ್ಲ ಎಂಬ ಭ್ರಮಾಧೀನರಾದ ಬೆಂಗಳೂರಿಗರು ಈ ಲೇಖನವನ್ನು ಓದಿ, ನಮ್ಮ ಕನ್ನಡದ ಗರಿಮೆಯನ್ನು ಅರಿತುಕೊಳ್ಳಲಿ.

—ರಾಮಚಂದ್ರ ಎಂ.ಆರ್, ಬೆಂಗಳೂರು

## ಬಹುರೂಪಿ ಬುಡಕಟ್ಟು

ಮೇ 14 ರ ಸಂಚಿಕೆಯಲ್ಲಿ ಮಾಂಟೊ ಬರೆದಿರುವ 'ಬಹುರೂಪಿ ಬುಡಕಟ್ಟು' ವಿಚಾರಗಳು ಇಷ್ಟವಾಯಿತು. ಅವರನ್ನು ಆಧುನಿಕತೆಯತ್ತ ಸೆಳೆಯದೆ ಅವರ ಪಾಡಿಗೆ ಬಿಡುವುದು ಒಳಿತು ಎನಿಸಿದರೂ ಕೆಲವು ಕ್ರೂರ ಆಚರಣೆಗಳಿಂದ ಮುಕ್ತರಾಗುವುದು ಅವಶ್ಯ. ಈ ಬುಡಕಟ್ಟು ಜನಾಂಗಗಳ ಬಗ್ಗೆ ತಿಳಿಯುವುದು ಆಸಕ್ತಿದಾಯಕ ವಿಷಯವಾಗಿದೆ. ಈ ಲೇಖನ ಓದಿ ಕೊರೊನಾ ಗುಂಗಿನಿಂದ ಹೊರಬಂದಂತಾಯಿತು. ಒಂದೊಂದೇ ಬುಡಕಟ್ಟಿನ ಬಗ್ಗೆ ವಿವರ ನೀಡಿದರೆ ಇನ್ನೂ ಸಂತೋಷ.

—ಕೆ. ನಿರ್ಮಲ ಮರಡಿಹಳ್ಳಿ, ಚಿತ್ರದುರ್ಗ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in